(SRI KADIDAL MANJAPPA.)
in some departments to fill up certain vacancies that might arise later on. I cannot answer the Hon'ble Member's question.

Sri G. DUGGAPPA.—May I know how many Scheduled Caste candidates were Oppointed after the issue of this Government Order reserving 18 per cent of appointments to be filled up by direct recruitment ?

Sri Kadidal MANJAPPA.—Notice.

Sri G. DUGGAPPA.—Will it be possible for the Government to say how many gazetted posts were filled up by Depressed Class candidates ?

Sri Kadidal MANJAPPA.—Even for hat I require notice.

Feeder Channel to Doddakere Tank in Bannerghatta Road.

Q.—274. Sri H. T. PUTTAPPA (Hosakote-Anekal—Scheduled Castes).—

Will the Government be pleased to state :—

(*a*) whether the people of Anekal Town had requested for the construction of a feeder channel to feed the Doddakere tank situated in the Bannerghatta Road, Anekal Town ;

(*b*) if so, whether any estimate has been prepared ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) A rough estimate has been prepared.

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ನಾಲೆಯ ಕೆಲಸವನ್ನು ಇಪ್ಪು ಕಾಲದವರೆಗೂ ಮಾಡಿಸಿಕೊಡದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಲೆವಲ್ ಸರಿಯಾಗಿಲ್ಲ. ಅದಕ್ಕೋಸ್ಕರ ಅದನ್ನು ಮಾಡಿಸುವುದಕ್ಕಾಗಲಿಲ್ಲ.

Committee on "Mitra Mela."

Q.—86. Sri B. NARAYANASWAMY (Mysore City South).—

Will the Government be pleased to state :—

(*a*) whether the Committee appointed by the University Council have submitted their report regarding the affairs pertaining to "Mitra Mela" function held in the Maharaja's College, Mysore ;

(*b*) if so, the action taken in the matter ?

A.—Sri A. G. RAMACHANDRA RAO (Minister for Law and Education).—

(*a*) Not yet.

(*b*) Does not arise in view of answer to (*a*).

Sri B. NARAYANASWAMY.—May I know whether this "Mitra Mela" society is still functioning ?

Sri Kadidal MANJAPPA.—I do not know.

Mr. SPEAKER.—Perhaps the Hon'ble Member is better aware of it.

Tailoring Section of Davangere Occupational Institute (Reduction in fees for lady candidates).

Q.—645. Srimathi Bellary SIDDAMMA (Davangere).—

Will the Government be pleased to state :—

(*a*) whether they would reduce the fees levied on the lady candidates in the Tailoring Section of the Davangere Occupational Institute ;

(*b*) whether the managing Committee of the said institution has sent any recommendation regarding the reduction of fees in the case of girl candidates ;

(*c*) the steps taken by them in this matter ?

A.—Sri A. G. RAMACHANDRA RAO (Minister for Law and Education).—

(*a*) No.

(*b*) Yes.

(*c*) The Superintendent has been informed by the Director of Technical Education that the proposals to reduce the fees are not feasible.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ತಾವು ಇಲ್ಲಿ (ಸಿ) ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ಸೂಕ್ತವಲ್ಲ ಎಂದು ತಿಳಿಸಿದ್ದೀರಿ. ಯಾವರೀತಿ ಇದು ಸೂಕ್ತವಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದೇ ದರ್ಜೆಯ ಶಾಲೆಗಳಿಗೆ ಒಂದೊಂದು ಕಡೆ ಒಂದೊಂದು ರೇಟ್ ಪ್ರಕಾರ ಫೀಜನ್ನು ವಿಧಿಸುವುದು ಸೂಕ್ತವಾದುದಲ್ಲ ಪೆಂತಲೂ ಮತ್ತು ಹೆಂಗಸರಿಗೂ ಗಂಡಸರಿಗೂ

ಒಂದು ಭೇದವನ್ನು ಕಲ್ಪಿಸುವುದು ಸರಿಯಲ್ಲವೆಂದು ಹೇಳಿ ಅದು ಸೂಕ್ತವಲ್ಲ ಎಂದೂ ಹೇಳಲಾಗಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಬೇರೆ ಟೆಕ್ನಿಕಲ್ ಎಜ್ಯುಕೇಷನ್ ಗಳಿಗೆಲ್ಲಾ ಫೀಜನ್ನು ಬದಲಾಯಿಸುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಬೇರೆ ಪ್ರಶ್ನೆ ಆಯಿತು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹಾಗಿದ್ದ ಪಕ್ಷಕ್ಕೆ ಹೆಚ್ಚು ಜನ ಹೆಂಗಸರು ಈ ವಿದ್ಯಾಭ್ಯಾಸಕ್ಕೆ ಸೇರಲು ಆಗುವುದಿಲ್ಲ ಎಂದರೆ ಅದಕ್ಕೆ ತಮ್ಮ ಅಭಿಪ್ರಾಯವೇನು?

ಶ್ರೀ ಕಡಿದಾಳ್ ಮಂಜಪ್ಪ. ನಾಕಷ್ಟು ಜನರು ಸೇರುತ್ತಿದ್ದಾರೆಂದು ನಮಗೆ ತಿಳಿದುಬಂದಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಸ್ವಾಮಿ. ನನ್ನ ಪ್ರಶ್ನೆಗೆ ಉತ್ತರ ಕೊಡತಕ್ಕ ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲವಾದ್ದರಿಂದ ನಾನು ಪ್ರಶ್ನೆ ಕೇಳಲು ಇಷ್ಟಪಡುವುದಿಲ್ಲ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳಿಲ್ಲದಿದ್ದರೆ ಬೇರೆ ಮಂತ್ರಿಗಳು ಉತ್ತರ ಕೊಡಬಹುದು. ನೀವು ಪ್ರಶ್ನೆ ಕೇಳಿ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಬೇರೆ ಮಂತ್ರಿಗಳಿಂದ ಸರಿಯಾದ ಉತ್ತರ ಬರುವುದಿಲ್ಲ. ಈ ಪ್ರಶ್ನೆಯ ಬಗ್ಗೆ ಅನೇಕ ವರ್ಷಗಳಿಂದ ಮ್ಯಾನೇಜಿಂಗ್ ಬೋರ್ಡಿನವರು ಒತ್ತಾಯಪಡಿಸುತ್ತಿದ್ದರೂ ಸರ್ಕಾರದವರು ಇದಕ್ಕೆ ಗಮನವನ್ನೇ ಕೊಟ್ಟಿಲ್ಲ. ಆದುದರಿಂದ ನಾನು ಈ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುವುದಿಲ್ಲ.

Sri K. HANUMANTHAIYA.—Let him ask. I will answer.

Chintamani Occupational Institute (inclusion of new courses).

Q.—654. Sri M. C. ANJANEYA REDDY (Chintamani).—

Will the Government be pleased to state :—

whether the new diploma courses, *i.e.*, Machine Tools Technology and Mechanical Engineering (General) are introduced in the Chintamani Occupational Institute and whether the same is included in the Second Five-Year Plan ?

A.—Sri K. HANUMANTHAIYA (Chief Minister) [On behalf of Sri A. G. Ramachandra Rao (Minister for Law and Education)].—

A Diploma course in Mechanical Engineering (General) is included in the proposals under the Second Five-Year Plan.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆ ಮ್ಯಾನೇಜಿಂಗ್ ಸಮಿತಿಯವರು ಈ ಎರಡು ಡಿಪ್ಲೋಮಾಗಳನ್ನೂ ಅಲ್ಲಿಗೆ ಕೊಡಬೇಕೆಂದು ಅನೇಕ ವರ್ಷಗಳಿಂದ ಮನವಿಗಳನ್ನು ಕಳುಹಿಸುತ್ತಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ತಾವು ಹೇಳುತ್ತಿರುವ ಹಾಗೆ ಅವರು ಕಳುಹಿಸಿರಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇದಕ್ಕೋಸ್ಕರವಾಗಿಯೇ ನಾನು ಪ್ರಶ್ನೆ ಕೇಳುವುದಿಲ್ಲ ಎಂದು ಹೇಳಿದ್ದು. ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ.

Mr. SPEAKER.—We will take it up next day.

Sri K. HANUMANTHAIYA.—The assurance he wants is that it will be included in the Second Five-Year Plan. ಆ ಎರಡನೇ ಪಂಚವಾರ್ಷಿಕ ಯೋಜನೆ ಈ ನಭೆಯ ಮುಂದೆ ಚರ್ಚೆಗೆ ಬರುವುದರಲ್ಲಿದೆ. ಆ ಯೋಜನೆಯಲ್ಲಿ ನಾವು ಈ ಟೆಕ್ನಿಕಲ್ ಎಜ್ಯುಕೇಷನ್ನಿಗೆ ಹೆಚ್ಚಿನ ಮೊಬಲಗನ್ನು ಒದಗಿಸುವ ರೀತಿಯಲ್ಲಿ ಅದನ್ನು ತಯಾರು ಮಾಡಿರುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ನಮ್ಮ ಮನವಿಗಳನ್ನು ಏತಕ್ಕಾಗಿ ಮಂತ್ರಿಗಳು ಇದುವರೆಗೂ ಸ್ವೀಕರಿಸಲಿಲ್ಲ ?

ಶ್ರೀ ಕೆ. ಹನುಮಂತಯ್ಯ.—ತಾವು ತಮ್ಮ ಪ್ರಶ್ನೆಯಲ್ಲಿ ಕೇಳಿರುವುದು " whether the same is included in the Second Five-Year Plan " ಎಂದು ಮುಂಜೆ ಈ ಯೋಜನೆ ಇಲ್ಲಿ ಚರ್ಚೆಗೆ ಬಂದಾಗ ಅದನ್ನು ಪ್ರಸ್ತಾಪಮಾಡೋಣ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ನಾವು ಎರಡು ವಿಷಯಗಳನ್ನು ಕೇಳಿದ್ದರೆ ತಾವು ಆ ಪ್ಲೈಕಿ ಮೈಕಾನಿಕಲ್ ಇಂಜಿನಿಯರಿಂಗ್ ಒಂದು ಬಾಬನ್ನು ಮಾತ್ರ ಸೇರಿಸಿ-ಇನ್ನೊಂದನ್ನು ಕೈಬಿಡಲು ಕಾರಣವೇನು ?

ಶ್ರೀ ಕೆ. ಹನುಮಂತಯ್ಯ.—ಈ ಎಲ್ಲಾ ವಿಚಾರಗಳನ್ನೂ ಆ ದ್ವಿತೀಯ ಪಾಂಚವಾರ್ಷಿಕ ಯೋಜನೆ ಚರ್ಚೆಗೆ ಬಂದಾಗ ಪರಿಶೀಲನೆ ಮಾಡೋಣ.

Appointment of Her Highness the Yuvarani of Mysore as Rajpramukh for a temporary period.

Q.—205. Sri S. SRINIVASA IYENGAR (T.-Narasipur).—

Will the Government be pleased to state :—

(*a*) whether the President of India consulted the State while appointing recently Her Highness the Yuvarani of Mysore as the Rajpramukh during the period of absence of His Highness the Rajpramukh of Mysore ;

(*b*) if so, what were the considerations kept in view by the State while making the recommendation ?

A.—Sri K. HANUMANTHAIYA (Chief Minister).—

(*a*) Yes.

(*b*) The duties of the Rajpramukh.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ರಾಜಪ್ರಮುಖರ ನೇಮಕದ ವಿಚಾರದಲ್ಲಿ ಈ ಹಿಂದೆ ಶ್ರೀಮದ್ಮಹಾರಾಜರವರಿಗೂ ಮತ್ತು ಇಂಡಿಯಾ ಸರ್ಕಾರದವರಿಗೂ ಏನಾದರೂ ಒಪ್ಪಂದವಾಗಿತ್ತೇ ?